# ಕ್ರಿಸ್ತನ ಚಿಕಿತ್ಸಕ ಅಥವಾ ಚೇತರಿಸುವ ಶಾಂತಿಯನ್ನು ಜಗತ್ತಿನಲ್ಲಿ ಹಂಚಿಕೊಳ್ಳುವುದು 2025

## ಎಫ್.ಎಲ್.ಸಿ.ಇನ್ – ಗ್ಯಾದರಿಂಗ್ ಲಿಟರ್ಜಿ



ಕನಿಷ್ಠ ನಾಣ್ಯ ಸಂಗ್ರಹದ ಅನ್ಯೋನ್ಯ ಸೇವೆ ಎಂಬುದು ಅಂತರರಾಷ್ಟ್ರೀಯ ಕನಿಷ್ಠ ನಾಣ್ಯದ ಅನ್ಯೋನ್ಯ ಸಮಿತಿಯಿಂದ ನೀಡಲಾದ ಮಾರ್ಗದರ್ಶಕ ರೂಪವಾಗಿದೆ .

ಸ್ಥಳೀಯ ಮಹಿಳಾ ಗುಂಪುಗಳು, ಚರ್ಚುಗಳು ಸಂಗೀತಗಳನ್ನು (Hymns) ಭಜನೆಗಳನ್ನು ಆಯ್ಕೆ ಮಾಡಲು ತಮ್ಮ ಮಧ್ಯೆ ಸಂಪರ್ಕ ಏರ್ಪಡಿಸಿಕೊಳ್ಳಲು ಸಂಪರ್ಕದ ಮಾರ್ಗಗಳಾದ ಉದಾಹರಣೆಗೆ ನಾಟಕೀಕರಣ, ಸಂದೇಶ, ಸಣ್ಣ ಗುಂಪು ಚರ್ಚೆ ಮೊದಲಾದ ವಿಭಿನ್ನ ರೀತಿಯ ಸಂಪರ್ಕ ಮಾರ್ಗಗಳನ್ನು ಬಳಸಿಕೊಳ್ಳಲು ಅವಕಾಶವಿದೆ.

ಇದಲ್ಲದೆ ಈ ಸೇವೆಯಲ್ಲಿ ವಿವಿಧ ನಾಯಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದರಲ್ಲಿ, ತಮ್ಮ ಧ್ವನಿಗೂಡಿಸುವುದರಲ್ಲಿ ತಾವೂ ಪಾಲ್ಗೊಳ್ಳಲು ಮತ್ತು ಹೆಚ್ಚು ಜನರು ಇದರಲ್ಲಿ ಭಾಗವಹಿಸುವಂತೆ ಅವರನ್ನು ಉತ್ತೇಜಿಸಲು ಅವಕಾಶವಿದೆ.

ಇನ್- ಗ್ಯಾದರಿಂಗ್. (ಸಂಗ್ರಹ ಸೇವೆ ) ಆರಾಧನೆಯ ಕ್ರಮವು (ಲಿಟರ್ಜಿ) ಪ್ರತಿ ವರ್ಷ ಜುಲೈ ತಿಂಗಳಲ್ಲಿ ಪ್ರಕಟಣೆಗೊಂಡು ವಿತರಣೆಯಾಗುತ್ತದೆ, ಇದರಿಂದ ಎಫ್‌ಎಲ್‌ಸಿ ಇನ್- ಗಾದ ರಿಂಗ್ ಪ್ರಾರ್ಥನೆ ಅಥವಾ ಸೇವೆಯು ಸಂಪ್ರದಾಯ ಬದ್ಧವಾಗಿ ಸೆಪ್ಟಂಬರ್ ತಿಂಗಳಲ್ಲಿ ನಡೆಯಲು ಸಿದ್ಧವಾಗುತ್ತದೆ ನಮ್ಮ ಪ್ರಾದೇಶಿಕ ಏಕೀಕೃತ ಕ್ರೈಸ್ತ ಸಹಭಾಗಿಗಳು (ಇಕ್ಯುಮಿನಿಕಲ್) ಪಂಥಸಂಬಂಧಿ ಸಹಭಾಗಿಗಳು, ಮಹಿಳಾ ಗುಂಪುಗಳು ಮತ್ತು ಸ್ಥಳೀಯ ಸಭೆಗಳು ವರ್ಷಪೂರ್ತಿ ತಮ್ಮ ಅಗತ್ಯಕ್ಕೆ ತಕ್ಕಂತೆ ಸಂಗ್ರಹಣಾ ಸೇವೆಯನ್ನು ಏರ್ಪಡಿಸಿಕೊಳ್ಳಲು ಅವಕಾಶವಿದೆ.

ಈ ವರ್ಷದ ಪ್ರಾರ್ಥನೆಯ ವೃತ್ತ (ಸಿಓಪಿ) ಸಂಪುಟ 28ರ ಮೂಲ ವಿಚಾರ ಅಥವಾ ಉಪಾಸನೆಯ ವಿಷಯ (ಥೀಮ್) ಕ್ರಿಸ್ತನ ಆರೈಕೆ ಶಾಂತಿಯನ್ನು ಜಗತ್ತಿನಲ್ಲಿ ಹಂಚಿಕೊಳ್ಳುವುದು ಇದರಿಂದ ಪ್ರೇರಣೆಗೊಂಡಿದೆ. ದೇವರು ಅತಿಯಾಗಿ ಪ್ರೀತಿಸುವ ಈ ಜಗತ್ತು ನೋವನ್ನುಂಟು ಮಾಡುತ್ತಿದೆ, ಸೌಖ್ಯ ಆಶೀರ್ವಾದ ಪಡೆದವರು ನೋವನ್ನು ಶಮನಗೊಳಿಸುತ್ತಾರೆ, ಈ ಉಡುಗೊರೆಯನ್ನು ಜಗತ್ತಿಗೆ ಹಂಚುವುದಕ್ಕೆ ನಾವು ಕರೆಯಲ್ಪಟ್ಟಿದ್ದೇವೆ. ಪರಿಸರ ಸಂಕಷ್ಟಗಳು ಯುದ್ಧಗಳು ಸಂಘರ್ಷಗಳು ಮತ್ತು ಮಹಿಳಾ ಹತ್ಯೆ ಈ ಮೂರು ಪ್ರಮುಖ ಸಮಸ್ಯೆಗಳನ್ನು ನಾವು ಈ ಥೀಮ್ ಮೂಲಕ ಪರಿಹರಿಸಬೇಕು, ಮೌನವಾಗಿರುವವರು, ಶೋಷಿತರ ಗೋಳಾಟವನ್ನು ಕಷ್ಟ ಸಂಕಟಗಳನ್ನು ಮತ್ತು ತಮಗಾಗಿ ತಾವೇ ಮಾತನಾಡಲು ಶಕ್ತಿ ಇಲ್ಲದವರ (ಪ್ರಕೃತಿ ಅಥವಾ ಪ್ರಾಣಿಗಳು) ಗೋಳಾಟವನ್ನು ಕೇಳಿಸಿಕೊಳ್ಳಲು ಉದ್ದೇಶಪೂರ್ವಕವಾಗಿ ನಾವು ಕರೆಯಲ್ಪಟ್ಟಿದ್ದೇವೆ. ಕೇಳಿಸಿಕೊಳ್ಳಲು, ಆಲಿಸಲು ಮತ್ತು ದೇವರ ಆತ್ಮನ ಮಾರ್ಗದರ್ಶನಕ್ಕೆ ಮನಸ್ಸು ತೆರೆಯಲು ನಮಗೆ ಸುರಕ್ಷಿತ ಸ್ಥಳ ಬೇಕು.

ಸೂಚನೆ:–ನೀವು ಅನುಸರಿಸಿದ ಆರಾಧನೆಯ ಕ್ರಮ ವೈಯಕ್ತಿಕ ಸಾಕ್ಷಿ ಕಥೆಗಳು ಮುಂತಾದವುಗಳನ್ನು icficph@gmail.com ಇಲ್ಲಿ ಹಂಚಿ ಕೊಂಡರೆ ಐ ಐ ಸಿ ಎಫ್ ಎಲ್ ಸಿ ತನ್ನ ಮೆಚ್ಚುಗೆಯನ್ನು ಸೂಚಿಸುತ್ತದೆ.

ನಿಮ್ಮ ಪ್ರಾರ್ಥನೆಯು ಅರ್ಥಪೂರ್ಣವಾಗಿ ಪ್ರೇರಣದಾಯಕವಾಗಿ ಆತ್ಮಿಕವಾಗಿರಲಿ

**ಸ್ವಲ್ಪ ಹೊತ್ತು ಮೌನ**

**ಸ್ವಾಗತ ಮತ್ತು ಶುಭ ವಂದನೆ**

**ಹಿನ್ನೆಲೆ**

**ಆರಾಧನಾ ಕ್ರಮ ಓದುವವರು (ಲಿಟರ್ಜಿಸ್ಟ್):-**

ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ನಡೆಯುವ ಕನಿಷ್ಠ ನಾಣ್ಯ ಸಂಗ್ರಹಣಾ ಪ್ರಾರ್ಥನಾ ಸೇವೆಯು ಎಫ್ ಎಲ್ ಸಿ ಯ ಸಹೋದ್ಯೋಗಿಗಳು ಬೆಂಬಲಿಗರು ಇತರೆ ಸಹಭಾಗಿಗಳಿಂದ ನಡೆಸಲ್ಪಡುತ್ತದೆ, ಇದರ ಉದ್ದೇಶ ಎಫ್ ಎಲ್ ಸಿ ಆರಿಸಿದ ಥೀಮ್ ನ ಆಚರಣೆ. ಈ ಸಮಯದಲ್ಲಿ ಪ್ರತಿಯೊಬ್ಬರು ತಾವು ಸಂಗ್ರಹಿಸಿದ ನಾಣ್ಯಗಳನ್ನು ತಂದು ಪ್ರಾರ್ಥನಾಪೂರ್ವಕವಾಗಿ ಎಫ್‌ಎ ಎಲ್ ಸಿ ಗುಂಪಿಗೆ ಹಸ್ತಾಂತರ ಮಾಡುವುದು.

ಎಫ್ ಎಲ್ ಸಿ ಸಂಗ್ರಹಣಾ ಸೇವೆಯು ನಾವು ಇತರರೊಡನೆ ಹಾಗೂ ದೇವರೊಂದಿಗೆ ಮಾಡುವ ಪ್ರಯಾಣ ಮತ್ತು ನ್ಯಾಯ ಶಾಂತಿ ಮತ್ತು ಪುನರ್ಮಿಲನಕ್ಕಿರುವ ನಮ್ಮ ಬದ್ಧತೆಯನ್ನು ನೆನಪಿಸಿಕೊಳ್ಳುವ ಸಂದರ್ಭ.

**ಮೌನ**

**ಆಹ್ವಾನ**

ಜೀವಿಸುವ ದೇವರ ಬಳಿ ಬನ್ನಿ
ಬಡವರ ಪಕ್ಕದಲ್ಲಿ ನಿಲ್ಲಲು ಬನ್ನಿ

ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವವರೊಡನೆ ಹೋರಾಡಲು ಬನ್ನಿ
ದೇವರ ನ್ಯಾಯವನ್ನು ವಿರೋಧಿಸುವುದೆಲ್ಲವನ್ನು ನಿರ್ಬಂಧಿಸುವುದಕ್ಕೆ ಬನ್ನಿ
ಜೀವಿಸುವ ದೇವರ ಬಳಿ ಬನ್ನಿ.

**ಸ್ವಲ್ಪ ಹೊತ್ತು ಮೌನ**
**(ಕ್ಯಾಂಡಲ್ ಹಚ್ಚಿಸಬೇಕು)**

**ಕಣ್ಣೀರು ದುಃಖ ವ್ಯಸನಗಳ ಸರಣಿ**

**ಆರಾಧನಾ ಕ್ರಮ ಓದುವರು**

ಹಿಂಸೆಯ ಇರುವಿಕೆಯಿಂದ ತಪ್ಪಿಸಿಕೊಳ್ಳಲು ನಾನು ಎಲ್ಲಿಗೆ ಹೋಗಲಿ ?

- **ಧ್ವನಿ-1.** ನಾನು ಮನಿಲಾಗೆ ಹೋದರೆ ಅಲ್ಲಿ ಎಲ್ಲಾ ಕಡೆ ಸ್ಥಳೀಯರನ್ನುಹಿಂಸಿಸಿ ಕೊಲ್ಲುವುದು ತಾರಕಕ್ಕೇರಿದೆ.
- **ಧ್ವನಿ-2.** ನಾನು ಜೋಹಾನ್ಸ್ ಬರ್ಗ್ ಗೆ ಹೋದರೆ ಅಲ್ಲಿ ದಕ್ಷಿಣ ಆಫ್ರಿಕನ್ನರ ಪಟ್ಟಣ ಪ್ರದೇಶಗಳು ಹಿಂಸೆಯಿಂದ ಆವರಿಸಲ್ಪಟ್ಟಿವೆ.
- **ಧ್ವನಿ-3** ನಾನು ಪೊಲೀಸ್, ಮಿನ್ನೆ ಲೂಯಿಸ್ ವಿಲ್ಲ ಅಥವಾ ರಯೋ ಡಿ ಜನೇರಿಯೋ ಗೆ ಹೋದರೆ ಅಲ್ಲಿನ ರಸ್ತೆಗಳಲ್ಲಿರುವ ರಕ್ತವು ನಮಗೆ ಅತ್ಯಧಿಕವಾಗಿ ಕಾಣುತ್ತದೆ.
- **ಧ್ವನಿ-4.** ನಾನು ಜಮ್ಮೈಕಾ ಗೆ ಹೋದರೆ ಅಲ್ಲಿ ಬಹಿಷ್ಕರಿಸಲ್ಪಟ್ಟ ಜನರ ಹಿಂಸಾ ಚಟುವಟಿಕೆಗಳು ನಿಯಂತ್ರಣವನ್ನು ಮೀರಿದೆ.
- **ಧ್ವನಿ-5.** ಯುರೋಪಿಗೆ ಹೋದರೆ ನಿರಾಶ್ರಿತರನ್ನು ತಿರಸ್ಕರಿಸಿರುವುದು ಮತ್ತು ಅವರ ಅಸಹಾಯಕತೆಯನ್ನು ಬಹಿರಂಗಪಡಿಸುತ್ತದೆ.

ಸೂಚನೆ:- ಇಲ್ಲಿ ನೆರದಿರುವ ನಿಮ್ಮಲ್ಲಿ ಯಾರಿಗಾದರೂ ಈ ರೀತಿಯ ತೊಂದರೆಗಳು ಹಿಂಸೆಗಳಾಗಿದ್ದರೆ ಅಥವಾ ನೋಡಿದ್ದರೆ ನಿಮ್ಮ ಅನುಭವಗಳನ್ನು ಹಂಚಿಕೊಳ್ಳಬಹುದು.

**ಕ್ಷಣ ಕಾಲ ಮೌನ**

**ಜನರು ಓದಬೇಕು:-** ಈ ರೀತಿಯ ಸ್ಥಳಗಳಲ್ಲಿ ನಾವು ಹೇಗೆ ಪ್ರಾರ್ಥಿಸುವುದು ? ಯಾವ ಪರಿಸ್ಥಿತಿಯಲ್ಲಿ ನಾವು ಏನು ಹೇಳಲು ಸಾಧ್ಯವಿಲ್ಲವೋ ಅಲ್ಲಿ ಪ್ರಾರ್ಥಿಸುವುದು ಹೇಗೆ ? ಹಿಂಸೆ ಇದ್ದರೂ ಎಲ್ಲವನ್ನೂ ಹಂತ ಹಂತವಾಗಿ ಸರಳಗೊಳಿಸಬೇಕೇ ? ಕಲಿಯಬೇಕೇ ? ವಿವರಿಸಬೇಕೇ.

**ಲಿಟರ್ಜಿಸ್ಟ್ ಓದಬೇಕು:-**

ಹಿಂಸೆಯೇ ತುಂಬಿಕೊಂಡಿರುವ ಸ್ಥಳಕ್ಕೆ ಹೋಗುವುದು ಅಲ್ಲಿ ದೇವರಿರಬೇಕೇ ಎಂಬ ಪ್ರಶ್ನೆಯನ್ನು ಕೇಳುವುದಾಗಿದೆ, ಅಂತಹ ಸ್ಥಳಗಳಲ್ಲಿ ಪ್ರಾರ್ಥಿಸುವುದು ಜೀವನದ ಅಸಂಬದ್ಧತೆಯನ್ನು ಎದುರಿಸುವುದು ಮತ್ತು ಆ ಪರಿಸ್ಥಿತಿಗಳಲ್ಲಿ ಜೀವಿಸುತ್ತಿರುವವರು ಮಾತ್ರ ಹೊಂದಬಹುದಾದ ದೃಢತೆಯನ್ನು ಮತ್ತು ಅವರ ಸ್ಥೈರ್ಯವನ್ನ ಅನ್ವೇಶಿಸುವುದು ಆಗಿದೆ.

**ಸೂಚನೆ:- ಈ ಸಮಯದಲ್ಲಿ ಜನರು ತಮ್ಮ ನೋವು ಮತ್ತು ಹತಾಶೆಗಳನ್ನು ಹಂಚಿಕೊಳ್ಳಲು ಆಹ್ವಾನಿಸಬಹುದು.**

**ಕೆಲಕಾಲ ಮೌನ**

## ರೇಮದ ಕೂಗು

**(ಧ್ಯಾನಕ್ಕಾಗಿ ಸಂಗೀತ )**

Cry of Ramah by Collen Fullmer
Click link in YouTube

## ಹಾಡಿನ ಸಾರಾಂಶ

ಕಾಲೇನ್ ಫುಲ್ ಮರ್ ರಚಿಸಿರುವ ಈ ಹಾಡು ಯುದ್ಧದ ದುಃಖ ವನ್ನು ವಿವರಿಸಿ ಶಾಂತಿಗಾಗಿ ಹಂಬಲವನ್ನು ವ್ಯಕ್ತಪಡಿಸುತ್ತದೆ. ರೇಮಾ ಹೀರೋಶೀಮ ಮತ್ತು ಸಾಲ್ವಡಾರ್ ಗಳಲ್ಲಿ ತಮ್ಮ ಮಕ್ಕಳನ್ನು ಕಳೆದುಕೊಂಡ ಮಹಿಳೆಯರ ದುಃಖವನ್ನು ಉಲ್ಲೇಖಿಸುತ್ತದೆ. ಯುದ್ಧದ ಯಂತ್ರವನ್ನು ವಿರೋಧಿಸುವ ಅವರ ಧ್ವನಿಯನ್ನು ವಿವರಿಸುತ್ತದೆ. ನಮ್ಮಲ್ಲಿರುವ ಕ್ರೌರ್ಯವನ್ನು ಕರುಣೆಯಿಂದ ಎದುರಿಸಿದರೆ ಶಾಂತಿ ಸಿಗುತ್ತದೆ ಎಂಬುದನ್ನು ಸೂಚಿಸುತ್ತದೆ. ನಮ್ಮ ನಾಯಕರು ಮಕ್ಕಳ ಕಣ್ಣುಗಳನ್ನು ನೋಡಿದರೆ ಅವರು ಯುದ್ಧದ ಬಜೆಟ್ ಗಳನ್ನು ಮತ್ತು ಬಾಂಬ್ ಗಳನ್ನು ಮರೆತುಬಿಡುತ್ತಾರೆ ಎಂದು ತಿಳಿಸುತ್ತದೆ. ಎಲ್ಲಾ ರಾಷ್ಟ್ರಗಳು ಒಟ್ಟಾಗಿ ಸೇರಿಕೊಂಡು ಕುಟುಂಬದಂತೆ ಭಾವಿಸಿದರೆ ಹಾಗೂ ದೇವರ ಸೃಷ್ಟಿಯ ಸೌಂದರ್ಯವೂ ನಮ್ಮನ್ನು ಅದ್ಭುತಗಳಿಗೆ ನಡೆಸಿದರೆ , ನಾವು ವಿನಮ್ರವಾಗಿ ನಮ್ಮ ಹೆದರಿಕೆ ಮತ್ತು ಅಹಂಕಾರವನ್ನು ತೊರೆದು ಹೊಸ ಜೀವನದ ಉದಯಕ್ಕೆ ನಾಂದಿ ಹಾಡಬಹುದು.

## ಮೌನ ಸ್ವಲ್ಪ ಹೊತ್ತು

**ಮಾರಿಯೋ ಪ್ಯೂಬ್ಲೋ:- (ಕ್ರಿಯಾತ್ಮಕವಾಗಿ ಓದುವುದು)**

- ನಾನು ಮಾರಿಯೋ ಪ್ಯೂಬ್ಲೋ.
- ಈ ಜಗತ್ತು ದೇವರ ಪುತ್ರರು ಮತ್ತು ಪುತ್ರಿಯರ ಒಕ್ಕೂಟ.
- ನಾನು ಭೂಮಿಯಲ್ಲೇ ಸ್ವರ್ಗದಅನುಭವಕ್ಕಾಗಿ ಹಾತೊರೆಯುತ್ತಿದ್ದೇನೆ.
- ನಾನು ದೂರ ಪ್ರಯಾಣಿಸಿದ್ದೇನೆ.
- ಕನಸುಗಳು ಮತ್ತು ದರ್ಶನಗಳು ನನ್ನ ಸಂಗಾತಿಗಳಾಗಿವೆ.
- ನಾನು ಆ ನಂಟಾಗಿದ್ದೇನೆ.
- ಜನರ ನೃತ್ಯ, ಹಾಡುಗಳು ಮತ್ತು ಕವಿತೆಗಳನ್ನು ನೇಯುವ ನೂಲಾಗಿದ್ದೇನೆ.
- ನಾನು ಮಕ್ಕಳು ಹಾಡುವ ಸಂಗೀತ ಮತ್ತು ಅರಣ್ಯ ಗುನುಗುವ ಹಾಡಾಗಿದ್ದೇನೆ.
- ನಾನು ಹಾಡುಗಳಿಗೆ ಪ್ರಾಸಬದ್ಧ ನೃತ್ಯವಾಗಿದ್ದೆ.
- ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದೇನೆ.
- ನಾನು ಬಡತನದಿಂದ, ಹಸಿವಿನಿಂದ ಅವಮಾನಿತಳಾಗಿದ್ದೇನೆ.
- ನಾನು ಬಾಯಾರಿದ್ದೇನೆ ಮತ್ತು ಕೊಳಚೆ ಪ್ರದೇಶಗಳಲ್ಲಿ ಚಿಮ್ಮಿ ಹರಿಯುವ ಬುಗ್ಗೆಗಳಿಗಾಗಿ ತವಕಪಡುತ್ತಿದ್ದೇನೆ.
- ನಾನು ಕೆಲಸದಿಂದ ವಜಾಗೊಂಡೆ ಮತ್ತು ನನ್ನ ಮಕ್ಕಳಿಗೆ ಏಕೆ ಎಂದು ವಿವರಿಸಲು ಸಾಧ್ಯವಾಗುತ್ತಿಲ್ಲ.
- ನಾನು ಭೂ ಹೀನ, ಮತ್ತು ಚಿನ್ನದ ಧಾನ್ಯಗಳು ಎಂದಿಗೂ ನನ್ನದಾಗಿರಲಿಲ್ಲ.
- ನಾನು ಜಮೀನ್ದಾರನ ಮರಗಳಿಂದ ಮಾವಿನ ಹಣ್ಣುಗಳನ್ನು ಕಿತ್ತಿದ್ದಕ್ಕಾಗಿ ಜೈಲಿನಲ್ಲಿದ್ದೆ.
- ನಾನು ಒಬ್ಬ ವಲಸಿಗ ಮತ್ತು ಅದು ಕಾನೂನಿನ ಪ್ರಕಾರ ಅಕ್ರಮ.
- ನಾನು ಸೆರೆವಾಸಿಯಾಗಿದ್ದೆ, ಹಿಂಸೆಗೆ ಒಳಗಾಗಿದ್ದೆ ಮತ್ತು ಬಹುತೇಕ ಕೊಲ್ಲಲ್ಪಟ್ಟಿದ್ದೆ.
- ನಾನು ನ್ಯಾಯಕ್ಕಾಗಿ ಕೂಗಿದ್ದರಿಂದ ಇವೆಲ್ಲವನ್ನು ಸಹಿಸಬೇಕಾಯಿತು.

- ನಾನು ನನ್ನ ರಕ್ತ ಸಂಬಂಧಿಯಲ್ಲದವರನ್ನು, ಸತ್ತವರನ್ನು ಸಮಾಧಿಮಾಡಿದ್ದೇನೆ.
- ನಾನು ತಾಯಂದಿರ ಅಳುವನ್ನು ಕೇಳಿದ್ದೇನೆ.
- ಏಕೆಂದರೆ ಅವರ ಗಂಡು ಮತ್ತು ಹೆಣ್ಣು ಮಕ್ಕಳನ್ನು ನ್ಯಾಯಾಂಗದ ಹೊರಗೆ ಕೊಲ್ಲಲಾಗಿದೆ.
- ನನ್ನ ಮೂಳೆಗಳೊಳಗೆ.
- ನನ್ನ ಮಾಂಸದೊಳಗೆ.
- ನನ್ನ ಹೃದಯದೊಳಗೆ.
- ನನ್ನ ಅಸ್ಥಿತ್ವದೊಳಗೆ.
- ಜೀವದ ಉಸಿರು.
- ಬೀಸುತ್ತಿದೆ... ಬೀಸುತ್ತಿದೆ... ಮತ್ತು ಬೀಸುತ್ತಿದೆ.
- ನನ್ನ ನೆನಪಿನೊಳಗೆ.
- ನನ್ನ ದೃಷ್ಠಿಯೊಳಗೆ.
- ನನ್ನ ಹೋರಾಟದೊಳಗೆ.
- ನನ್ನ ನಿರ್ಣಾಯಕ ಇಚ್ಛೆ ಮತ್ತು ಕ್ರಿಯೆಯೊಳಗೆ.
- ಮರು ಜನ್ಮ ಪಡೆಯಲು ಮತ್ತು ನನ್ನನ್ನು ಅಮಾನವೀಯಗೊಳಿಸುವ ಸರಪಳಿಗಳನ್ನು ಮುರಿಯಲು.
- ಈ ಗಾಳಿ
- ನನಗೆ, ಅನೇಕರಿಗೆ, ಎಲ್ಲಾ ಸೃಷ್ಟಿಗೆ ಹೊಸ ಜೀವನವನ್ನು ನೀಡುತ್ತಿದೆ.
- ಈ ಗಾಳಿ.
- ದೇವರ ಆತ್ಮದ ಜೀವ ಮತ್ತು ಪ್ರೀತಿ.

**ಮೌನದ ಕ್ಷಣಗಳು**

**ಉತ್ತರ – ಪ್ರತ್ಯುತ್ತರ**

**ಲಿಟರ್ಜಿಸ್ಟ್:–**

- ನಾವು ನಮ್ಮ ದುಃಖ ಗೋಳಾಟವನ್ನು ನೃತ್ಯವಾಗಿ ಬದಲಾಯಿಸಲಾಗಲ್ಲಿಲ್ಲ.
- ನಾವು ನಮ್ಮ ಕಣ್ಣೀರನ್ನು ನಗುವಾಗಿ ಪರಿವರ್ತಿಸಲಾಗಲಿಲ್ಲ.
- ನಾವು ರಾತ್ರಿ ಕಳೆದು ಬಂದ ಬೆಳಗ್ಗೆಯನ್ನು ಸ್ವಾಗತಿಸಲು ಆಗಲಿಲ್ಲ.
- ನಾವು ಉಲ್ಲಾಸದ ಕೂಗಾಗಿ ನಮ್ಮ ಧ್ವನಿಯನ್ನು ಸಡಿಲಗೊಳಿಸಲಾಗಲಿಲ್ಲ.

**ಜನರ ಪ್ರತ್ಯುತ್ತರ:–**

- ದೇವರೇ ನಮ್ಮ ಗೋಳಾಟವನ್ನು ಕೇಳು, ನೋವಿನ ಸಮಯದಲ್ಲಿ ನಮ್ಮ ನಿಟ್ಟುಸಿರುಗಳಿಗೆ ಕಿವಿಗೊಡು.
- ಆಹಾರಕ್ಕಾಗಿ, ನ್ಯಾಯಕ್ಕಾಗಿ ಹಾತೊರೆಯುತ್ತಿದ್ದ ಜನರ ಜೊತೆಯಲ್ಲಿದ್ದ ದೇವರೇ.
- ನಿನ್ನ ಉಪಸ್ಥಿತಿಯು ಅವರನ್ನು ಮುನ್ನಡೆಸಿತು.
- ಅವರನ್ನು ರಕ್ಷಿಸಿದ ಮೇಘವು (ಮೋಡ).
- ಅವರ ಮಾರ್ಗವನ್ನು ಬೆಳಗಿದ ಅಗ್ನಿ.
- ನಿನ್ನ ಭರವಸೆಗಾಗಿ ಬೇಡುತ್ತಿರುವ ಬಡ ಜನರಿಗೂ ನೀನು ಅದೇ ಕರುಣೆ ತೋರುವಿಯಾ?

**ಲಿಟರ್ಜಿಸ್ಟ್:-**

- ನಾವು ಒಂದು ಸಮುದಾಯವಾಗಿ ನಿನ್ನ ಬಳಿ ಬರುವೆವು.
- ನಾವು ನಿರೀಕ್ಷೆಯೆಂಬ ಬಂಧನದಿಂದ ಕಟ್ಟಲ್ಪಟ್ಟು ಪ್ರೀತಿಯಿಂದ ಬಲಗೊಂಡಿದ್ದೇವೆ.
- ಶಾಂತಿ ಮತ್ತು ಸಮೃದ್ಧಿಯಾಗಿರುವ ಭವಿಷ್ಯಕ್ಕೆ ನಡೆಯುವ ಹೋರಾಟದಲ್ಲಿ ಭಾಗಿಗಳಾಗುತ್ತೇವೆ.
- ಬಡತನ ಮತ್ತು ಪ್ರತಿರೋಧದಿಂದ ಸುರಕ್ಷತವಾಗಿರುವೆವು.
- ದುರ್ವ್ಯಸನ ಮತ್ತು ಶೋಷಣೆಯಿಂದ ಮುಕ್ತವಾಗಿ ಸುರಕ್ಷಿತವಾಗಿರುವ ಭವಿಷ್ಯಕ್ಕೆ ನಡೆಯುವ ಹೋರಾಟದಲ್ಲಿ ಭಾಗಿಗಳಾಗುತ್ತೇವೆ.

**ಜನರು:-**

- ಹಸಿವು ಮತ್ತು ಬಾಯಾರಿದವರನ್ನು ನೆನೆಪುಮಾಡಿಕೊಳ್ಳುತ್ತೇವೆ. ನಿರಾಶ್ರಿತರು, ರೋಗಿಗಳು ಮತ್ತು ತಮ್ಮ ಆರೈಕೆಗೆ ಮೂಲ (ಹಣ) ಇಲ್ಲದವರನ್ನು ನೆನಪು ಮಾಡಿಕೊಳ್ಳುತ್ತೇವೆ.
- ಗುಲಾಮರ, ಕಷ್ಟದಲ್ಲಿರುವವರ ಪರ ನಿಂತ, ಸಹಾಯ ಮಾಡಿದ ದೇವರೇ ನಾವು ನಿನ್ನ ಬಳಿಗೆ ಬರುತ್ತೇವೆ.
- ಅವರ ಗೋಳಾಟ ಕೇಳಲ್ಪಡಲಿ, ನ್ಯಾಯ ದೊರಕಲಿ.
- ಬಡವಳಾಗಿರುವ ಅವಳ ಮೇಲೆ ನಿನ್ನ ಕರುಣೆ ಇರಲಿ ಇದೇ ನಮ್ಮ ನಿರೀಕ್ಷೆ, ಇದೇ ನಮ್ಮ ಪ್ರಾರ್ಥನೆ. ಆಮೆನ್

**ಮೌನದ ಕ್ಷಣಗಳು**

**ಸಮುದಾಯ ಪ್ರಾರ್ಥನೆ**

- ನಿರ್ಲಕ್ಷಿಸಲ್ಪಟ್ಟ, ನಿರಾಶ್ರಿತರ ದೇವರೇ, ತಮ್ಮ ಆಹಾರ ಮತ್ತು ಆಶ್ರಯ ರಕ್ಷಣೆಯನ್ನು ಕಳೆದುಕೊಂಡವರ ಮೇಲೆ ನಿನ್ನ ಅಪಾರವಾದ ಕರುಣೆಯನ್ನು ತೋರಿಸು.
- ತಳ್ಳಲ್ಪಡುತ್ತೇವೆ, ಬೇರು ಸಹಿತ ಕೀಳಲ್ಪಡುತ್ತೇವೆ ಎಂಬ ಭಯದಿಂದ ಜೀವಿಸುತ್ತಿರುವವರನ್ನು ನಾವು ಯಾವಾಗಲೂ ಗಮನಿಸುವಂತೆ ಮಾಡು.
- ಬೇರೆಯವರ ತುಳಿತಕ್ಕೆ, ಕೆಳಗೆ ಬಿದ್ದವರ ಜೊತೆಯಲ್ಲಿ ನೀನು ಯಾವಾಗಲು ಇರು.
- ಪ್ರಪಂಚವು ಕೈಬಿಟ್ಟರೂ, ನಾನು ನಿಮ್ಮನ್ನು ಕೈಬಿಡುವುದಿಲ್ಲವೆಂಬ ಭರವಸೆಯನ್ನು, ತಿಳುವಳಿಕೆಯನ್ನು ಅವರಿಗೆ ಕೊಡು.
- ತಾವು ಏನು ಮಾಡುತ್ತಿದ್ದೇವೆ ಎಂಬ ಅರಿವಿಲ್ಲದ ಜನರಿಗಾಗಿ ನಿನ್ನ ಮಗನಾದ ನಮ್ಮ ರಕ್ಷಕನಾದ ಯೇಸುವಿನ ನಾಮದಲ್ಲಿ ನಿನ್ನ ಕ್ಷಮಾಪಣೆ ಕೇಳುತ್ತೇವೆ.

**ನಿಮ್ಮ ಜೀವನದಲ್ಲಿ ಶಾಂತಿ/ಸಮಾಧಾನವನ್ನು ಹೇಗೆ ಪಡಕೊಳ್ಳುವಿರಿ; ಕಂಡು ಕೊಳ್ಳುವಿರಿ ಮತ್ತು ಇತರೊಂದಿಗೆ ಹಂಚಿಕೊಳ್ಳುವಿರಿ?**

(ಕೆಳಗೆ ಸೂಚಿಸಿರುವ ಪ್ರಶ್ನೆಗಳನ್ನಾಧಾರಿಸಿಕೊಂಡು ನಿಮ್ಮ ಗುಂಪು/ಸಮುದಾಯದಲ್ಲಿ ಚರ್ಚಿಸಿರಿ)

- ನಿಮ್ಮ ಕುಟುಂಭ/ಸಮುದಾಯದಲ್ಲಿ ನೆಮ್ಮದಿ ಇಲ್ಲದಂತಹ ಸಂದರ್ಭ/ಘಟನೆಗಳು ಹೇಳಿ?
- ಇಂತಹ ಸಂದರ್ಭ/ಘಟನೆಗಳು ಬಂದಾಗ ನೀವು ಹೇಗೆ ಸ್ಪಂದಿಸಿದಿರಿ?
- ಪ್ರಸ್ತುತ ಪರಿಸ್ಥಿತಿಗಳಲ್ಲಿ ಈ ದುಗ್ಗಾಣಿ ಅನ್ಯೂನ್ಯತೆಯ (FLC –ಕೊರತೆಯಲ್ಲಿಯೂ ಮುನ್ನುಗ್ಗುವ ಸ್ವಭಾವದವರ ಅನ್ಯೋನ್ಯತೆ) ದರ್ಶನವಾದ ನ್ಯಾಯ; ನೆಮ್ಮದಿ ಮತ್ತುಸಂಧಾನಪಡಿಸುವದು ಅಥವಾ ಸಾಮರಸ್ಯತೆ, ಇವುಗಳನ್ನು ನಿಮ್ಮ ಜೀವನದ ಮೂಲಕ ಹೇಗೆ ನಿರೂಪಿಸುತ್ತೀರಿ?
- ನಿಮ್ಮ ಗುಂಪು/ ಸಭೆ, ನಿಮ್ಮ ಸಮುದಾಯ/ರಾಜ್ಯ/ರಾಷ್ಟ್ರದಲ್ಲಿ ಶಾಂತಿ, ಸಮಾಧಾನ ಸ್ಥಾಪಿಸುವ ಕಾರ್ಯಗಳಲ್ಲಿ ಹೇಗೆ ತೊಡಗಿಸಿಕೊಳ್ಳುತ್ತಿದ್ದೀರಿ?
- ಕ್ರಿಸ್ತನ ಶಾಂತಿ, ಸಮಾಧಾನಗಳನ್ನು ಸಾರ್ವತ್ರಿಕವಾಗಿ ಸ್ಥಾಪಿಸುವ ಕಾರ್ಯದಲ್ಲಿ ನಿನ್ನ ಪಾತ್ರ ಮತ್ತು ನಿರ್ಧಾರವೇನು?

(ನಿಮ್ಮ ವೈಯುಕ್ತಿಕ ನಿರ್ಧಾರಗಳನ್ನು ಚೀಟಿಗಳ ಮೇಲೆ ಬರೆದು ಅರ್ಪಣೆಗಳ ತಟ್ಟೆಯ ಮೂಲಕ ಅರ್ಪಿಸಬಹುದು.)

**ಅವಲೋಕನಾ ಸಮಯ:**

ಈ ವಿಷಯದಲ್ಲಿನೀವು ಗಮನಿಸಿ ಅಳವಡಿಸಿಕೊಳ್ಳಬೇಕಾದ ಅಂಶಗಳನ್ನು ಗುಂಪಿನಲ್ಲಿ ಹಂಚಿಕೊಳ್ಳಿರಿ. ಇಲ್ಲದಿದ್ದಲ್ಲಿ, ಸಂಪನ್ಮೂಲ ವ್ಯಕ್ತಿಗಳ ಮೂಲಕ ಪ್ರಚೋದನೆಪಡೆಯಬಹುದು.)

**ಕಾಣಿಕೆ ಮತ್ತು ಅರ್ಪಣೆಗಳನ್ನು ಸ್ವೀಕರಿಸಿ ಪ್ರಾರ್ಥಿಸಿ ಆಶೀರ್ವದಿಸಿ.**

**ನಾಯಕಿ:** ಲೀಸ್ಟ್ ಕಾಯಿನ್ ಅನ್ಯೋನ್ಯತೆಯ ಮೂಲಕ ಆಗುತ್ತಿರುವ ನ್ಯಾಯ, ಶಾಂತಿ ಮತ್ತು ದೇವರೊಂದಿಗೆ ಸಮಾಧಾನ, ಈ ಕಾರ್ಯಗಳಿಗೆ ನಮ್ಮ ಬೆಂಬಲ ಹಾಗೂ ಭಾಗವಹಿಸುವಿಕೆಯನ್ನು ತೋರುವಂತದ್ದು, ನೀವು ಹೃತ್ಪೂರ್ವಕವಾಗಿ ಅರ್ಪಿಸುವ ಈ ಕಾಣಿಕೆಗಳು ಮತ್ತು ನಿರ್ಧಾರಗಳು. ಈ ಬಾರಿಯೂ ನಿಮ್ಮಕಾಣಿಕೆಗಳೂ ಹಾಗೆಯೇ ಈ ಸೇವೆಯಲ್ಲಿ ನಿಮ್ಮ ನಿರ್ಧಾರಗಳನ್ನು ಚೀಟುಗಳಲ್ಲಿ ಬರೆದು ದೇವರಿಗೆ ಸಮರ್ಪಿಸುವಂತೆ ಕೋರಲಾಗಿದೆ.

**<u>FLC ಪ್ರಾರ್ಥನೆ – (ಎಲ್ಲರೂ ಸೇರಿ)</u>**

ಪ್ರೀತಿ ಸ್ವರೂಪನಾದ ಸೃಷ್ಟಿ ಕರ್ತನೇ! ನಿಮ್ಮ ಪರಿಶುದ್ಧ ಸನ್ನಿಧಿಯಲ್ಲಿ ನಮ್ಮನ್ನು ನಾವು ಪ್ರಸ್ತುತ ಪಡಿಸಿಕೊಂಡು ನಿಮ್ಮಅದ್ವಿತೀಯ ಉಪಕಾರಗಳಿಗಾಗಿ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇವೆ. ಮುಖ್ಯವಾಗಿ ದೈವಿಕವಾದ ಪ್ರೀತಿ ಮತ್ತು ಕ್ಷಮಿಸುವಿಕೆಯ ವ್ಯಕ್ತಿತ್ವವನ್ನು ನಮ್ಮಲ್ಲಿ ಬೆಳೆಸುತ್ತಿರುವ ಲೀಸ್ಟ್ ಕಾಯಿನ್ ಅನ್ಯೋನ್ಯತೆಗಾಗಿ ನಿಮಗೆ ವಂದನೆಗಳು. ಸಂದೇಹ, ಸಂಶಯ, ವಿರೋದ ಸ್ವಭಾವ ಮುಂತಾದ ಬಂಧನಗಳಿಂದ ನಮ್ಮನ್ನು ಬಿಡುಗಡೆ ಮಾಡಿರಿ. ಕೊಡುವುದರಲ್ಲಿಯೂ, ಪಡಕೊಳ್ಳುವದರಲ್ಲಿಯೂ ಸಂಭ್ರಮಿಸುವಂತೆ ನಮಗೆ ಸಮಸ್ತ ಮಾನವ ಕುಲದೊಂದಿಗೆ ಐಕ್ಯತೆಯಲ್ಲಿ ಬಾಳಲು ಪ್ರಚೋದಿಸಿರಿ.

ಪ್ರಿಯ ದೇವರೆ, ನಮ್ಮ ಪ್ರೀತಿಯ ಸಂಕೇತವಾಗಿ ಈ "ದುಗ್ಗಾಣಿ" ಕಾಣಿಕೆಗಳನ್ನು ಸ್ವೀಕರಿಸಿ. ಈ "ದುಗ್ಗಾಣಿ" ಗಳಿಂದ ಆಗುವ ಮಹತ್ಕಾರ್ಯಗಳನ್ನು ಗ್ರಹಿಸುವಂತೆ ನಮಗೆ ಸಹಾಯ ಮಾಡಿರಿ. ನಿನ್ನ ಪ್ರೀತಿಯ ಮಗನ ಜೀವನ ಮತ್ತು ಪುನರುಥ್ಥಾನಗಳಿಂದ ಕಾಣಬಂದಂತೆ, ನಿನ್ನ ಸೃಷ್ಟಿಯನ್ನು ಪ್ರೀತಿಯಿಂದ ಕಾಪಾಡಲು ನಮಗೆ ಸಹಾಯ ಮಾಡು. ಆಮೆನ್.

**ಸ್ತುತಿ ಗಾನ: -** **ದೇವರಿಗೆ ಸ್ತೋತ್ರ, ಎಲ್ಲಾ ಆಶಿರ್ವಾದಗಳಿಗೆ ಮೂಲಕರ್ತನು ಆತನೇ;**
**ದೇವರಿಗೆ ಸ್ತೋತ್ರ ಮಾಡಿರಿ ಎಲ್ಲಾ ಪ್ರಾಣಿಗಳೇ;**
**ಯೇಸುವಿನಲ್ಲಿ ಪರಿಪೂರ್ಣವಾಗಿ ಪ್ರಕಟವಾದ ದೇವರಿಗೆ ಸ್ತೋತ್ರ;**
**ಒಬ್ಬನೇ ಆದ ಸೃಷ್ಟಿ ಕರ್ತ, ವಾಕ್ಯ ಮತ್ತು ಆತ್ಮ.... ಆಮೆನ್.**

**ಪರಾರ್ಥ ಪ್ರಾರ್ಥನೆಗಳು:**

(ಇಲ್ಲಿ ನಾಯಿಕಿ ಸಭೆ ಸೇರಿದವರ ಪ್ರಾರ್ಥನಾ ಬೇಡಿಕೆಗಳಿಗಾಗಿ ಕೇಳಬಹುದು ಹಾಗೆಯೇ, ಸಭೆ ಸೇರಿದವರಿಂದ ಒಬ್ಬರನ್ನು ಪರಾರ್ಥ ಪ್ರಾರ್ಥನೆಗಳು ಮಾಡಲು ಕೇಳಬಹದು.)

**ಸಮುದಾಯದ ಪ್ರಾರ್ಥನೆ:**

(ಸ್ಫೂರ್ತಿ: ಪೋಪ್ ಫ್ರಾನ್ಸಿಸ್ರವರು 2016ರ ಸಾರ್ವತ್ರಿಕ ಶಾಂತಿ ದಿವಸದ ಪ್ರಯುಕ್ತ ನೀಡಿದ ಸಂದೇಶ)

ಕರ್ತನೆ, ಅನೇಕಾವರ್ತಿ ಪ್ರಪಂಚದ ಸಮಸ್ಯಗಳು ಬಹಳ ದೊಡ್ಡವು; ಜಠಿಲವಾದವು ಅಥವ ನಮ್ಮ ಹತ್ತಿರದಲ್ಲಿ ಅಲ್ಲ ಎಂದು ಹೇಳಿ ತಪ್ಪಿಸಿಕೊಳ್ಳುತ್ತೇವೆ. ನಮ್ಮ ಉದಾಸೀನತೆಗಾಗಿ ನಮ್ಮನ್ನು ಕ್ಷಮಿಸು. ಕರ್ತನೆ, ನನ್ನನ್ನು, ನಮ್ಮ ಕುಟುಂಬ ಮತ್ತು ನಮಗೆ ಎದುರಾಗುವ ಸವಾಲುಗಳನ್ನು ಮಾತ್ರ ಗಮನಿಸುತ್ತಿದ್ದೇವೆ ಮತ್ತು ಹೀಗೆ ದೂರಸರಿದು ಹೋಗಿದ್ದೇವೆ, ಕ್ಷಮಿಸು. ನಿಮ್ಮ ನೇತ್ರಗಳಿಂದ ನೋಡಲು ಸಹಾಯಮಾಡು; ಒಬ್ಬರಿನೊಬ್ಬರು ನೋಡಿಕೊಳ್ಳುವ ನೇತ್ರಗಳು, ಮತ್ತು ಗ್ರಹಿಸುವ ಶಕ್ತಿ ಅನುಗ್ರಹಿಸು. ಸಂಧಾನದಲ್ಲಿ ಸಂದಿಸುವ ಸಮುದಾಯಗಳೂ ಸೃಜನಾತ್ಮಕವಾಗಿ ಸಹಕರಿಸಿಕೊಳ್ಳವ ವ್ಯಕ್ತಿಗಳು ಇರುವಂತಹ ಆ ನಿನ್ನ ಕನಸನ್ನು ನಾವೂ ಕಾಣುವಂತೆ ಮಾಡು. ಒಗ್ಗಟ್ಟಿನಿಂದ ಕಾರ್ಯೋನ್ಮುಖರಾಗುವ ವ್ಯಕ್ತಿಗಳನ್ನಾಗಿ ಮಾಡು. ಪ್ರಾರ್ಥನೆ, ಸಂಧಿಸುವುವಿಕೆ ಮತ್ತು ಗ್ರಹಿಕೆಯಿಂದ ಶಾಂತಿ ವಾಸ್ತವವಾಗಿ ನೆಲೆಯಾಗುವುದು. . . . .**ಆಮೆನ್.**

(Adopted from USCCB Prayer for 2016 World Day of Peace)

**ಮುಕ್ತಾಯ ಸಂಗೀತ:**

**ಅಂತ್ಯಾಶೀರ್ವಾದ** (ಸಂತ ಫ್ರಾನ್ಸಿಸ್ ರವರು ಬಳಿಸಿದ ಮಾದಿರಿ

ಸುಲಭ ಉತ್ತರಗಳು; ಹುರುಳಿಲ್ಲದ ಸಂಭಂದಗಳು ಮತ್ತು ಅಪರಿಪೂರ್ಣವಾದ ಸತ್ಯದ ವಾದಗಳನ್ನು ತೊರೆದು, ನಿಮ್ಮ ಹೃದಯಗಳಲ್ಲಿ ಅಚಲವಾದ ವಾತ್ಸಲ್ಯದಿಂದ ಕೂಡಿದ ಧೈರ್ಯದೊಂದಿಗೆ ಸತ್ಯವನ್ನು ಬಯಸುವಂತೆ ನಿಮ್ಮನ್ನು ಸಮಾದಾನ ರಹಿತವಾದ ಕಸಿವಿಸಿಯೊಂದಿಗೆ ದೇವರು ನಿಮ್ಮನ್ನುಆಶಿರ್ವದಿಸಲಿ.

ಇತರರಿಗೆ ಆಗುವ ಅನ್ಯಾಯ, ದಬ್ಬಾಳಿಕೆ ಮತ್ತು ಶೋಷಣೆಗಳನ್ನೂ ನೀವು ಪರಿಶುದ್ಧವಾದ ಸಿಟ್ಟಿನಿಂದ ನೋಡುವಂತೆಯೂ, ಅವಿರತವಾಗಿ ನ್ಯಾಯ, ಸ್ವಾತಂತ್ರ ಮತ್ತು ಶಾಂತಿಗಾಗಿ ದುಡಿಯುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ.

ನೋವಿನಲ್ಲಿ ನಲಿಯುವವರು, ತಿರಸ್ಕಾರ, ಹಸಿವು ಅಥವಾ ತಮಗೆ ಅತಿ ಪ್ರಿಯವಾದದ್ದನ್ನೆಲ್ಲಾ ಕಳಕೊಂಡವರೊಂದಿಗೆ ಅನುತಾಪದಿಂದ ದುಃಖಿಸಿ, ಕೈ ನೀಗಿ, ಬಲಪಡಿಸಿ ಅವರ ನೋವನ್ನು ಸಂಬ್ರುಮದೊಡನೆ, ಶಾಂತಿಗೆ ಪರಿವರ್ತಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ.

ಇತರರು ಸ್ವಶಕ್ತಿಯಿಂದ ಮಾಡಲು ಅಸಾಧ್ಯವಾದವುಗಳನ್ನು ಕೇವಲ ದೇವರ ಕೃಪೆಯಿಂದಲೇ ಈ ಲೋಕದಲ್ಲಿ ಮಾಡಿ ವ್ಯತ್ಯಾಸವನ್ನು ತೋರಿಸುವೆನೆಂಬ ಭರವಸೆಯೊಂದಿಗೆ ಜೀವಿಸುವ ಆಶೀರ್ವಾದವನ್ನು ದೇವರು ನಿಮಗೆ ದಯಪಾಲಿಸಲಿ ಮತ್ತು ಸರ್ವೋನ್ನತ ಸಾರ್ವಭೌಮನೂ ನಮ್ಮಸೃಷ್ಟಿ ಕರ್ತನಾದ ದೇವರೂ;
ನರಾವತಾರಿಯೂ, ವಾಕ್ಯವೂ, ನಮ್ಮ ಸಹೋದರನೂ ಮತ್ತು ರಕ್ಷಕನೂ ಆದ ಯೇಸು ಕ್ರಿಸ್ತನೂ;
ಹಾಗೂ ನಮ್ಮ ಮಧ್ಯಸ್ಥನೂ, ಸಹಾಯಕನೂ ಆದ ಪವಿತ್ರಆತ್ಮನೂ
ನಿಮ್ಮನ್ನು ಆಶೀರ್ದಿಸಿ ನಿಮ್ಮೊಂದಿಗೆ ಇಂದೂ ಎಂದೆಂದಿಗೂ ಇರಲಿ.... **ಆಮೆನ್.**

## ಅನುಭಂಧ – 1

**ಮೊದಲನೇಯ ಓದುಗರು:** *ಈ ದುಗ್ಗಾಣಿ ಅನ್ಯೋನ್ಯತೆಯ ಚರಿತ್ರೆ ( ಓದಿ ಅಥವ ಪ್ರದರ್ಶಿಸಿ)*

ಮೊದಲನೇಯ ವಿಧಾನ (ಉದ್ವವಾದ ಕ್ರಮ)

**ಎರಡನೇಯ ಓದುಗರು:** ಈ ದುಗ್ಗಾಣಿ ಅನ್ಯೋನ್ಯತೆಯ (FLC) ದರ್ಶನವನ್ನು ಪಡಕೊಂಡವರು 1956ರಲ್ಲಿ ಶ್ರೀಮತಿ ಶಾಂತಿ ಸೊಲಮನ್ ಎಂಬ ಭಾರತೀಯ ಕ್ರೈಸ್ತಳು. ಶ್ರೀಮತಿ ಶಾಂತಿ ಯವರು, ಅಮೆರಿಕಾ ದೇಶದ ಪ್ರೆಸ್ಬಿಟೇರಿಯನ್ ಮಹಿಳಾ ಅನ್ಯೋನ್ಯತೆಯವರಿಂದ ಕಳುಹಿಸಲ್ಪಟ್ಟ ಸೇವಾ ನಿಯೋಗ ತಂಡದ ಸದಸ್ಯಳು. ಈ ತಂಡವು ಏಷ್ಯಾ ಖಂಡದ ಎಲ್ಲಾ ದೇಶಗಳಲ್ಲಿ ಸಂಚಾರ ಮಾಡಿ, ಎರಡನೇಯ ಪ್ರಪಂಚ ಮಹಾಸಂಗ್ರಾಮದಲ್ಲಿ ಶೋಷಿತ ಮಹಿಳೆಯರ ಸಮಸ್ಯೆಗಳನ್ನು ಶೇಖರಣೆ ಮಾಡಿದರು – ಈ ಮಹಿಳೆಯರು ಅನುಭವಿಸಿದ ಧೌರ್ಜನ್ಯ, ಸಂಕ್ಷೋಬ, ತೀರದ ನೊವು ಮತ್ತು ಮಾನವೀಯತೆಯಲ್ಲಿ ಭರವಸೆ ಕಳಕೊಂಡಿರುವದನ್ನು ಕಂಡಿದರು ಮತ್ತು ತಿಳುಕೊಂಡರು.

**ಮೂರನೇಯ ಓದುಗರು:** ಶ್ರೀಮತಿ ಶಾಂತಿ ಮತ್ತು ಅವರ ತಂಡದವರು ಜಪಾನ್ ದೇಶವನ್ನು ಸಂದರ್ಶಿಸಿದಾಗ, ಆ ದೇಶದ ಮಹಿಳಾ ತಂಡವು ಈ ದೊಡ್ಡ ತಂಡವನ್ನುಆಮಂತ್ರಿಸಿಕೊಳ್ಳಲು ವಿಮಾನ ನಿಲ್ದಾಣಕ್ಕೆ ಬಂದು ಕೆವಲ ಮೂರು ಹಾರಗಳನ್ನು ತಂದು ಅಮೆರಿಕಾ ದೇಶದವರನ್ನು ಹೊರತುಪಡಿಸಿ ಶ್ರೀಮತಿ ಶಾಂತಿ ಮತ್ತಿಬ್ಬರಿಗೆ ಹಾಕಿದರು. ಕಾರಣ ಕೇಳಿದ್ದಾಗ, ಜನರಲ್ ಮೆಕಾರ್ಥರ್ ಮಾಡಿದ ನಷ್ಟ ಸಾಕಾಯಿತು; ಅಮೆರಿಕಾದವರಿಗೆ ನಮ್ಮ ದೇಶದಲ್ಲಿ ಸ್ವಾಗತ ಇಲ್ಲ ಎಂದರು. ಶಾಂತಿ ಮತ್ತು ತಂಡದವರು ಜಪಾನ್ ದೇಶವು ವಿಸ್ತುತವಾಗಿ ನಾಶವಾದದ್ದನ್ನು ನೋಡಿದರು ಮತ್ತು1945 ರಲ್ಲಿ ಅಮೆರಿಕಾ ಸೈನ್ಯದವರು ಹಿರೋಷಿಮಾ ನಗರದ ಮೇಲೆ ಮಾಡಿದ ಅಣು ಬಾಂಬ್ಸ್ಪೋಟದಿಂದ, ಸುಮಾರು 80,000 ಕ್ಕೂ ಹೆಚ್ಚು ಜನರು ಅದೇ ಘಳಿಗೆಯಲ್ಲಿ ಮೃತಪಟ್ಟರು ಮಾತ್ರವಲ್ಲ, ಈ ಸ್ಪೋಟದಿಂದ ಉತ್ಪತ್ತಿಯಾದ ಅಣು ವಿಕರಣದಿಂದ ಮತ್ತಷ್ಟೇ ಜನರು ಭಯಂಕರವಾದ ನೋವು ಅನುಭವಿಸಿ ಪ್ರಾಣಬಿಟ್ಟರು ಎಂದು ತಿಳುಕೊಂಡರು.

**ನಾಲ್ಕನೇಯ ಓದುಗರು:** ಶ್ರೀಮತಿ ಶಾಂತಿ ಮತ್ತು ತಂಡದವರು ಫಿಲಿಪೈನ್ಸ್ ದೇಶಕ್ಕೆ ಹೋದರು. ಅಲ್ಲಿ ಫಿಲಿಪೈನ್ಸ್ ದೇಶದವರು ತಮ್ಮ ಒಡವೆಗಳನ್ನು ಮಾರುತ್ತಿದ್ದನ್ನು ಕಂಡರು. ವಿಚಾರಿಸಿದಾಗ, ಜಪಾನೀಯರು

2ನೇಯ ಪ್ರಪಂಚ ಮಹಾಯುದ್ಧದಲ್ಲಿ ತಮ್ಮ ದೇಶವನ್ನು ಆಕ್ರಮಿಸಿಕೊಂಡು ಧ್ವಂಸಮಾಡಿದ್ದ ಸಭಾಮಂದಿರ (Church) ಪುನರ್ ನಿರ್ಮಾಣ ಮಾಡುವದಕ್ಕೆ ಎಂದು ತಿಳುಕೊಂಡರು. ಆಗ ಆ ಸ್ತ್ರೀಯರನ್ನು ಜಪಾನ್ದೇಶದಿಂದ ಒಂದು ತಂಡವು ಸಂಧಾನಮಾಡಿಕೊಳ್ಳುವುದಕ್ಕಾಗಿ ಬಂದರೆ . . . ಎಂದು ಕೇಳಿದ್ದಾಗ "ನಮ್ಮ ಈ ಜೀವನ ಕಾಲದಲ್ಲಿಅಸಾಧ್ಯ" ಎಂಬ ಖಚಿತವಾದ ಉತ್ತರ ಬಂದಿತು.

**ಐದನೇಯ ಓದುಗರು:** ಅಲ್ಲಿಂದ ಈ ತಂಡವು ದಕ್ಷಿಣ ಕೊರಿಯಾ ದೇಶಕ್ಕೆ ಹೋದಾಗ, ವೀಸಾ ಸಿಗದಿರುವ ಕಾರಣದಿಂದ ಶ್ರೀಮತಿ ಶಾಂತಿ ಫಿಲಿಪೈನ್ಸ್ನಲ್ಲೇ ಉಳಕೊಂಡರು. ಕಾರಣ, ಅ ಸಮಯದಲ್ಲಿಇಂಡಿಯಾ ಮತ್ತು ದಕ್ಷಿಣ ಕೊರಿಯಾ ಸರ್ಕಾರಗಳ ನಡುವೆ ದೌತ್ಯ ಸಂಭಂಧಗಳು ಸರಿ ಇರಲಿಲ್ಲ, ಕೊರಿಯಾ ಯುದ್ದದ ನಂತರ ಭಾರತ ಪ್ರಧಾನಿ ಶ್ರೀ ಜವಹರಲಾಲ್ ನೆಹರು ವರು ಐಕ್ಯ ರಾಜ್ಯ ಸಮಿತಿಯ ಬೇಡಿಕೆ ಮೇರೆಗೆ, ತಟಸ್ಥ ನಾಯಕನಾಗಿ ಉತ್ತರ ಮತ್ತು ದಕ್ಷಿಣ ಕೊರಿಯಾಗಳ **"ಗಡಿ"**ನಿಗದಿ ಪಡಿಸಲು ಸಮ್ಮತಿಸಿದರು. ಶ್ರೀ ನೆಹರು ವರು ಉಭಯ ದೇಶಗಳ ನಡುವಿನ **"ಗಡಿ"** 38 ನೇಯ ಅಕ್ಷಾಂಶ (latitude) ಎಂದು ತೀರ್ಮಾನಿಸಿದರು. ಇದು ಎಲ್ಲರಿಗೂ ಸಮ್ಮತಿಯಾದರೂ, ಬಹುತೇಕ ಪಾಲು ಕೊರಿಯನ್ನುರು ತಮ್ಮ ದೇಶದ ವಿಭಜನೆಯನ್ನು ಒಪ್ಪಲಿಲ್ಲ ಹಾಗಾಗಿ, ಭಾರತಿಯಳಾದದ್ದರಿಂದ ಶ್ರೀಮತಿ ಶಾಂತಿಯವರಿಗೆ ಕೊರಿಯಾ ಬರಲು ಅನುಮತಿ ಸಿಗಲಿಲ್ಲ.

**ಎರಡನೇಯ ಓದುಗರು**: ಈ ವೃತ್ತಾಂತಗಳನ್ನು ಕೇಳಿ ನೋವು, ತಿರಸ್ಕಾರ, ವಿಭಜನೆ, ಗಡಿ ಮುಂತಾದ ಸಮಸ್ಯೆಗಳನ್ನು ನೋಡಿ, ಗ್ರಹಿಸಿ ಶ್ರೀಮತಿ ಶಾಂತಿಯವರು ಶಾಂತಿ, ನ್ಯಾಯ ಮತ್ತು ಸಂಧಾನಕ್ಕಾಗಿ ಪ್ರಾರ್ಥಿಸಿದಳು. ಕ್ರೈಸ್ತ ಮಹಿಳೆಯರು ಒಬ್ಬರೂ ವೈಯುಕ್ತವಾಗಿ ಪ್ರಾರ್ಥಿಸುವುದಾದರೆ ವ್ಯಕ್ತಿಗಳ ಮತ್ತು ದೇಶಗಳ ನಡುವೆ ಶಾಂತಿ, ನ್ಯಾಯ ಮತ್ತು ಸಂಧಾನದ ಕಿರು ಅಲೆಗಳು ಅಥವಾ ಮಂದ ಮಾರುತಗಳನ್ನು ಎಬ್ಬಿಸಬಹುದೆಂದು ನಂಬಿದಳು.

**ಮೂರನೇಯ ಓದುಗರು:** ಶಾಂತಿ ಮತ್ತು ಆ ತಂಡವು ಯಾರ ಜೊತೆಯೇ ಆಗಲಿ ಸಂಘರ್ಷಣೆ ಬಂದಾಗ ಪ್ರಾರ್ಥನೆಯಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಿದರು. ಮತ್ತು ತಮಗೆ ನೋವು ಮಾಡಿದವರನ್ನು ಅರ್ಥಮಾಡಿಕೊಂಡು, ಕ್ಷಮಿಸಲು ಬೇಕಾದ ಕೃಪೆ ಮತ್ತು ನಿಬ್ಬರತೆಗಾಗಿ ಪ್ರಾರ್ಥಿಸಲು ಸಂಕಲ್ಪ ಮಾಡಿ ಕೊಂಡರು ಹಾಗೆಯೇ, ಪ್ರಪಂಚದಲ್ಲಿ ಶಾಂತಿ, ನ್ಯಾಯ ಮತ್ತು ಸಂಧಾನತೆಗಾಗಿ ಅನುನಿತ್ಯ ಪ್ರಾರ್ಥಿಸ ತೊಡಗಿದರು.

**ನಾಲ್ಕನೇಯ ಓದುಗರು:** ತಾವು ಮಾಡುವ ಪ್ರತಿಯೊಂದು ಪ್ರಾರ್ಥನೆಗೆ ಸೂಚಕವಾಗಿ ತಮ್ಮ, ತಮ್ಮ ದೇಶದ ನಾಣ್ಯಗಳಲ್ಲಿ ಒಂದು **"ದುಗ್ಗಾಣಿಯನ್ನು"** ಎತ್ತಿಡಲು ನಿರ್ಧರಿಸಿದರು. ಎಲ್ಲಾ ರೀತಿಯ ಮಹಿಳೆಯರ ಆರ್ಥಿಕ-ಸಾಮಾಜಿಕ ಪರಿಸ್ಥಿತಿಗಳನ್ನೂ ಅಸಮಾನತೆಗಳನ್ನೂ ಗಮನದಲ್ಲಿಟ್ಟುಕೊಂಡು **"ಕಿರುನಾಣ್ಯ"** ವನ್ನು ಮಾತ್ರ ನೀಡಬೇಕೆಂದು ತೀರ್ಮಾನಿಸಿದರು.

**ಐದನೇಯ ಓದುಗರು:** ಈ **ದುಗ್ಗಾಣಿ ಅನ್ಯೋನ್ಯತೆ** (FLC) ಪ್ರಪಂಚದಲ್ಲಿ ಶಾಂತಿ, ನ್ಯಾಯ ಮತ್ತು ಸಾಮರಸ್ಯತೆಯ ಸ್ಥಾಪನೆಗಾಗಿ ಎಲ್ಲಾ ಕ್ರೈಸ್ತಪಂಗಡಗಳನ್ನು ಒಳಗೊಂಡ **"ಪ್ರಾರ್ಥನಾ ಚಳುವಳಿ".**
ಹೀಗೆ ಬಂದ **ದುಗ್ಗಾಣಿಗಳನ್ನು** ಲಿಂಗ ಸಮಾನತೆ ಮತ್ತು ವ್ಯಕ್ತಿ ಅಥವಾ ಮಾನವ ಗೌರವವನ್ನ ಗುರುತಿಸಿ, ಗೌರವಿಸುವ ಚಟುವಟಿಕೆಗಳಿಗಾಗಿ ಉಪಯೋಗಿಸಲಾಗುತ್ತದೆ.

**ಎರಡನೇಯ ವಿಧಾನ:** (ಕ್ಲುಪ್ತವಾದ ಕ್ರಮ)

**ಎರಡನೇಯ ಓದುಗರು:** ಇದು ಸಾರ್ವತ್ರಿಕ ಶಾಂತಿ, ನ್ಯಾಯ ಮಾತ್ತು ಸಾಮರಸ್ಯತೆಗಾಗಿ ಸ್ಥಾಪಿತವಾದ ಚಳುವಳಿ. ಈ ಚಳುವಳಿಯ ಮೂಲಕ ಪ್ರಪಂಚದಾದ್ಯಂತವಾಗಿ ಮಹಿಳೆಯರು ಒಟ್ಟುಗೂಡುತ್ತಾ ಶಾಂತಿ ಸ್ಥಾಪನೆಗಾಗಿ ಪ್ರಾರ್ಥಿಸಲು, ಶ್ರಮಿಸಲು ಒಬ್ಬರಿನೊಬ್ಬರು ಎಚ್ಚರಿಸಿಕೊಳ್ಳುತ್ತಾ ಇರುತ್ತಾರೆ.

**ಮೂರನೇಯ ಓದುಗರು:** ಈ **ದುಗಾಣಿ ಅನ್ಯೋನ್ಯತೆಯು** (FLC) ಭಾರತೀಯಳಾದ ಶ್ರೀಮತಿ ಶಾಂತಿ ಸೊಲಮನ್ ರವರಿಗೆ ದೇವರಿಂದ ಬಂದ ದರ್ಶನವಾಗಿದೆ. ಶ್ರೀಮತಿ ಶಾಂತಿ ಯವರು "ಪಸಿಫಿಕ ಸೇವಾನಿಯೋಗ ತಂಡದ ಸದಸ್ಯರು. ಈ ತಂಡದಲ್ಲಿ ಏಳು ದೇಶಗಳಿಂದ ಬಂದ ಮಹಿಳೆಯರು ಸದಸ್ಯರಾಗಿದ್ದರು. 1956 ರಲ್ಲಿ ಈ ತಂಡವು ಏಷಿಯಾ ಖಂಡದ ಅನೇಕ ದೇಶಗಳನ್ನು ಸಂದರ್ಶಿಸಿದರು. ಈ ಸೇವಾ ನಿಯೋಗವನ್ನು ಡಾ||

ಮಾರ್ಗರೆಟ್ ಶನ್ನನ್ ರವರು ಪ್ರೆಸ್ಬಿಟೇರಿಯನ್ ಚರ್ಚ್ ಆಫ್ ದಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ (PCUSA) ಈ ಸಂಸ್ಥೆಗಾಗಿ ಸಂಘಟಿಸಿದರು. ಈ ಸೇವಾ ನಿಯೋಗದೊಂದಿಗೆ ಪ್ರಯಾಣ ಮಾಡುತ್ತಾ ಶ್ರೀಮತಿ ಶಾಂತಿ ಯವರು ಎರಡನೇಯ ಪ್ರಪಂಚ ಮಹಾಸಂಗ್ರಾಮದಲ್ಲಿ ಏಷಿಯಾ ಖಂಡದ ಮಾಹಿಳೆಯರ ಮೇಲೆ ಅತ್ಯಾಚಾರ ದೌರ್ಜನ್ಯ, ಶೋಷಣೆಗಳ ವಿಚಾರ ಕೇಳಿ, ನೋಡಿ ತಿಳುಕೊಂಡರು. ಭಾರತ ಮತ್ತು ದಕ್ಷಣ ಕೊರಿಯಾ ದೇಶಗಳ ನಡುವೆ ದೌತ್ಯ ಸಂಭಂದಗಳು ಸರಿ ಇಲ್ಲದ ಕಾರಣ ಶ್ರೀಮತಿ ಶಾಂತಿಯವರ ವೀಸಾ ಅರ್ಜಿ ತಿರಸ್ಕರಿಸಲ್ಪಟ್ಟಿತು. ಹೀಗಾಗಿ, ಶ್ರೀಮತಿ ಶಾಂತಿ ಫಿಲಪೈನ್ಸ್ ನಲ್ಲಿ ಉಳುಕೊಂಡು ತಾನು ಕೇಳಿ, ನೋಡಿದ ಸಂಗತಿಗಳಿಗಾಗಿ ಪ್ರಾರ್ಥಿಸಿದಳು.

**ನಾಲ್ಕನೇಯ ಓದುಗರು:** ಈ ತಂಡವು ಹಿಂದಿರುಗಿ ಫಿಲಪೈನ್ಸ್ ನಲ್ಲಿ ಶ್ರೀಮತಿ ಶಾಂತಿ ಯವರನ್ನು ಸಂದಿಸಿದರು. ಆಗ ಶಾಂತಿ ಪ್ರಪಂಚದಲ್ಲಿಎಲ್ಲಾ ರಾಷ್ಟ್ರ ಗಡಿಗಳನ್ನೂ, ಮಾನವ ನಿರ್ಮಿತ ಆತಂಕಗಳನ್ನೂ ದಾಟಿ, ತೂರಿ ಹೋಗುವ ಶಾಂತಿಗಾಗಿ ಕ್ರೈಸ್ತ ಮಹಿಳೆಯರು ಸತತವಾಗಿ ಪ್ರಾರ್ಥನೆಯಲ್ಲಿ ತೊಡಗಿಸಿಕೊಳ್ಳುವ ದರ್ಶನದ ಕುರಿತು ಹಂಚಿ ಕೊಂಡರು. ಪ್ರತಿ ಕ್ರೈಸ್ತ ಮಹಿಳೆ ತನ್ನ ಜೀವನದಲ್ಲಿ ಮತ್ತು ಪ್ರಪಂಚದೆಲ್ಲಡೆ ಶಾಂತಿ, ನ್ಯಾಯ ಮತ್ತು ಸಾಮರಸ್ಯತೆ ಸ್ಥಾಪನೆಗಾಗಿ ಪ್ರಾರ್ಥನೆ ಮಾಡಬೇಕೆಂದು ಬಯಸಿದಳು ಹಾಗೆಯೇ ತಮ್ಮ ಪ್ರಾರ್ಥನೆಗೆ ಗುರುತಾಗಿ **"ಒಂದು ನಾಣ್ಯವನ್ನು"** ಎತ್ತಿಡಬೇಕೆಂಬ ಯೋಚನೆಯನ್ನು ಹಂಚಿಕೊಂಡಲು. ಅಂದರೆ, ತಮ್ಮ, ತಮ್ಮ ದೇಶದ ಕಡಮೆ ಅಥವಾ ಚಿಕ್ಕಮೌಲ್ಯದ ನಾಣ್ಯವನ್ನು ನೀಡಬೇಕು. ಈ ಮೂಲಕ ಎಲ್ಲಾ ಆರ್ಥಿಕ ಸಾಮಾಜಿಕ ಹಿನ್ನಲೆಯ ಮಹಿಳೆಯರು ಪ್ರಪಂಚಾದಾದ್ಯಂತ ಶಾಂತಿ ಸ್ಥಾಪನೆಗಾಗಿ ಪ್ರಾರ್ಥಸಲು ಮತ್ತು ಆರ್ಥಕವಾಗಿ ಭಾಗವಹಿಸಲು ಸಾದ್ಯವಾಗುವದು.

**ಐದನೇಯ ಓದುಗರು:** ಶ್ರೀಮತಿ ಶಾಂತಿ ಏಷಿಯಾ ಖಂಡದ ಕ್ರೈಸ್ತ ಮಹಿಳೆಯರು ಮತ್ತು ಪ್ರೆಸ್ಬಿಟೇರಿಯನ್ ಚರ್ಚ್ ಆಫ್ ದಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ (PCUSA) ಸಭೆಗೆ ಸೇರಿದ ಮಹಿಳೆಯರು ಜೊತೆ, ಜೊತೆಯಾಗಿ ಶಾಂತಿ, ನ್ಯಾಯ ಮತ್ತುಸಾಮರಸ್ಯತೆ ಪ್ರಾರ್ಥಿಸಿ, ಶ್ರಮಿಸುವಂತೆ ಪಂಥಾಹ್ವಾನ ನೀಡಿದ್ದಾರೆ. ತಂಡವು ಶ್ರೀಮತಿ ಶಾಂತಿ ಯವರ ಪಂಥಾಹ್ವಾನವನ್ನು ಸ್ವೀಕರಿಸಿತು.

ಹೀಗೆ ದುಗ್ಗಾಣಿ ಅನ್ಯೋನುತೆಯ – ಫೆಲೋಷಿಪ್ ಆಫ್ ಲೀಸ್ಟ್ ಕಾಯಿನ್ (FLC) ಉಥ್ಥಾನವಾಯಿತು.

*****